ಜನಿಕ ಮುಖಂಡರೊಡನೆ ಖುದ್ದಾಗಿ ಮಾತನಾಡಿದ್ದೇವೆ. ಇದು ಏನು ಅಂಥ ತಲೆ ಹೋಗತಕ್ಕ ಸಮಾಚಾರವಲ್ಲ. ರೀಪೇರಿ ಕೈಗೆತ್ತಿಕೊಳ್ಳಬೇಕಾದರೆ, ನೀರನ್ನು ಡಿಪ್ಲೀಟ್ ಮಾಡಬೇಕಾಗುತ್ತದೆ. ಒಳಭಾಗದಲ್ಲಿ ಡಿಪ್ಲೀಟ್ ಮಾಡದಿದ್ದರೆ, ರೀಪೇರಿ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಇದನ್ನು ಮಾಡುವುದಕ್ಕೆ ಎರಡು ತಿಂಗಳು ಬೇಕಾಗುತ್ತದೆ. ನೀರನ್ನು ಡಿಪ್ಲೀಟ್ ಮಾಡಿ ಕೆಲಸ ಮುಗಿಸುವುದಕ್ಕೆ ಎರಡು ತಿಂಗಳು ಬೇಕಾಗುತ್ತದೆ. ಇನ್ನು ಮುಂಚೆಯೇ ಮಾಡಬೇಕಾಗಿತ್ತು. ಆದರೆ ಈ ಪ್ರದೇಶಗಳಲ್ಲಿ ಸ್ಕ್ವಾಂಡಿಂಗ್ ಕ್ರಿಕ್ಯಾಪ್ ಇರುವುದರಿಂದ, ಅಲ್ಲಿಯ ಮುಖಂಡರುಗಳನ್ನು ಕೂಡ ಸರ್ಕಾರದವರು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಅವರ ಒಪ್ಪಿಗೆ ಪಡೆದಿದ್ದೇವೆ. 1973ರ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ರಿಪೇರಿ ಕಾರ್ಯವನ್ನು ಮುಗಿಸಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆ. ಅದರ ಪ್ರಕಾರ ನೋಟಿಫೈ ಮಾಡುತ್ತೇವೆ, ಮಾನ್ಯ ಕೃಷ್ಣಮೂರ್ತಿಯವರಾಗಲೀ, ಮಾನ್ಯ ಸದಸ್ಯರಾಗಲೀ ಗಾಬರಿ ಪಡಬೇಕಾದಂಥ ಸಮಾಚಾರವೇನಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಮಂತ್ರಿಗಳು, ರಿಪೇರಿಗೆ ಎರಡು ಲಕ್ಷರೂಪಾಯಿಗಳು ಬೇಕಾಗುತ್ತದೆ, ಹಾಗೂ ಯಾರೂ ಗಾಬರಿ ಪಡಬೇಕಾದ ವಿಷಯವಲ್ಲ ಎಂದು ಹೇಳಿದರು, ಈ ಕಟ್ಟೆಕಟ್ಟಿಸಿದ ಇಂಜನಿಯರು ಯಾರು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಒಂದು ಮುಖ್ಯ ಅಂಶವನ್ನು ಈ ಸಭೆಯ ಗಮನಕ್ಕೆ ತೆಗೆದುಕೊಂಡು ಬಂದರು, ಮಂತ್ರಿಗಳು ರಿಪೇರಿ ಮಾಡಿಸುತ್ತೇವೆ ಎಂದು ಹೇಳಿದ್ದಾರೆ. ನೀವು ಅದನ್ನು ಕಟ್ಟಿದಂಥ ಇಂಜನಿಯರು ಯಾರು ? ಪ್ರೊಫೆಸರ್ ಯಾರು ಎಂದು ಕೇಳಿದರೆ ಹೇಗೆ ?

ಶ್ರೀ ಸಿ. ಬೈರೇಗೌಡ (ದೇವಮಗರ್).—ಕೋಲಾರದ ಸರ್ಕಾರಿ ಕಾಲೇಜು ಆಡ್ಮಿಷನ್ ಬಗ್ಗೆ 5—6 ಸಾರಿ ಈ ಸಭೆಯಲ್ಲಿ ಹೇಳಿದ್ದೆ. ಇನ್ನೂ 100 ಚಿಲ್ಲರೆ ಜನಕ್ಕೆ ಅಲ್ಲಿ ಆಡ್ಮಿಷನ್ ಆಗಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮಂತ್ರಿಗಳ ಛೇಂಬರ್‌ಗೆ ಹೋಗಿ ನೋಡಿ, ಅವರಿಂದ ಫೋನ್ ಮಾಡಿಸಿ.

ಶ್ರೀ ಸಿ. ಬೈರೇಗೌಡ.—ಇವತ್ತು ಹನ್ನೊಂದೂವರೆ ಗಂಟೆಗೆ ಈ ವಿಷಯವನ್ನು ಮಾನ್ಯ ಅಧ್ಯಕ್ಷರಿಗೆ ಬರೆದು ಕಳುಹಿಸಿಬ್ಟೀನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬರೆದು ಕಳುಹಿಸಿದ ತಕ್ಷಣ ಈ ವಿಷಯವನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಮಂತ್ರಿಗಳು ಬಂದನಂತರ ನೋಡೋಣ.

Message from the Governor—Announcement

MADAM SPEAKER.—I have an announcement to make. I have received a message of His Excellency the Governor recommending the introduction of consideration of The Mysore Appropriation (No. 2) Bill, 1972.

Hon. Minister for Finance to introduce the Bill.

Mysore Appropriation (No. 2) Bill, 1972.

Introduction

SRI M. Y. GHORPADE (Minister for Finance).—I beg to introduce The Mysore Appropriation (No. 2) Bill, 1972.

MADAM SPEAKER.—The Mysore Appropriation (No. 2) Bill, 1972 is introduced.*

*Bill reproduced as an annexure.

SRI C. M. ARUMUGAM (K.G.F.).—Madam Speaker, I have got one point. As per Rule 64, "the Speaker may, on request being made to him or her, order the publication of any Bill (together with the Statement of Objects and Reasons, the memorandum regarding delegation of legislative power and the financial memorandum accompanying it) in the Gazette, although no motion has been made for leave to introduce the Bill. In that case, it shall not be necessary to move for leave to introduce the Bill and, if the Bill is afterwards introduced, it shall not be necessary to publish it again." That means, if the Bill is published, then there is no need to introduce the Bill.

MR. SPEAKER.—It has always to be introduced.

Sri H. SIDDAVEERAPPA.—I may say these two stages are two distinct stages. Publication is one stage and introduction is another. A Bill cannot be introduced without being published. That is a preliminary Stage. This is the second stage. The only thing is, no motion is necessary when it is to be introduced. Only he says: I introduce. That is perfectly in order.

MADAM SPEAKER.—The bill is introduced. The Hon'ble Minister may move the Bill standing in his name :

Motion to consider

Sri M. Y. GHORPADE : I beg to move :

' That the Mysore Appropriation (No. 2) Bill 1972 be taken into consideration.

MADAM SPEAKER.—Motion moved :

"That the Mysore Appropriation (No. 2) Bill 1972 be taken into consideration"

ಶ್ರೀ ಎಚ್. ಡಿ. ದೇವೇಗೌಡ (ಹೋಳೆನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ಮೈಸೂರು ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ಎರಡನೇ ಕಂತಿನ ವಿಧೇಯಕವನ್ನು ನಮ್ಮ ಮುಂದೆ ಅರ್ಥ ಸಚಿವರು ಮಂಡಿಸಿದ್ದಾರೆ. ಬಹುಶಃ ಈ ಸಭೆ ಒಪ್ಪಿಗೆ ಕೊಟ್ಟಮೇಲೆ ಇನ್ನು ಒಂದು ವರ್ಷ ಈ ಹಣ ಖರ್ಚು ಮಾಡುವುದಕ್ಕೆ ಸಭೆಯ ಅನುಮತಿ ಅವಶ್ಯಕವಿಲ್ಲ. ಮುಂದೆ ಏನಾದರೂ ತಾವು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ನಮ್ಮ ಮುಂದೆ ತರಬೇಕು ಅಷ್ಟೆ. ಈ ವಿಷಯದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಹಣವನ್ನು ಖರ್ಚುಮಾಡತಕ್ಕ ಕಾಲದಲ್ಲಿ ಪಕ್ಷಪಾತೀತವಾದ ದೃಷ್ಟಿಯಿಂದ ಖರ್ಚುಮಾಡತಕ್ಕ ಹಾಗೆ ನಡೆಸಿಕೊಳ್ಳಬೇಕು. ಪಕ್ಷಪಾತೀತ ದೃಷ್ಟಿಯಿಂದ ಖರ್ಚುಮಾಡತಕ್ಕ ಒಳ್ಳೆಯ ಸತ್‌ಸಂಪ್ರದಾಯವನ್ನು ಹಾಕಿಕೊಳ್ಳಬೇಕೆಂದು ನನ್ನ ಸೂಚನೆ. ಈ ರೀತಿ ನಿಮ್ಮ ಮೇಲೆ ಅನುಮಾನ ಏಕೆ ಎನ್ನಬಹುದು. ನಿಮ್ಮ ಬಗ್ಗೆ ಅನುಮಾನ ಪ್ರಾರಂಭವಾಗಿದೆ. ನಮ್ಮ ಪೂರ್ವಾಡಳಿತ ನಡೆಸಿದವರಿಗೆ ಎಂತೋಷಿಯಾಸಮ್ ತುಂಬಿ ಹರಿಯುತ್ತಿದೆ. ಬಹಳ ಸಂತೋಷ. ಅವರದು ಸ್ವಲ್ಪ ಓವರ್ ಎಂತೂಷಿಯಾಸಮ್. ವಿರೋಧ ಪಕ್ಷದವರು ಬಂದಿರತಕ್ಕ ಕ್ಷೇತ್ರಗಳಲ್ಲಿ ಹಣವನ್ನು ವಿನಿಯೋಗ ಮಾಡುವ ಕಾಲದಲ್ಲಿ ಈ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಹೆಚ್ಚು ಆದ್ಯತೆಯನ್ನು ಕೊಡಬೇಕು. ಆ ಕ್ಷೇತ್ರಗಳ ಪರಿಸ್ಥಿತಿಗೆ ಅನುಗುಣವಾಗಿ ಖರ್ಚು ಮಾಡತಕ್ಕ ಹಾಗೆ ನಡೆಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ಎರಡು ವಿಷಯಗಳಲ್ಲಿ ಸರ್ಕಾರದ ನಿರ್ದಿಷ್ಟವಾದ ಅಭಿಪ್ರಾಯಬೇಕು. ಒಂದು ತಾವು ಈಗಾಗಲೇ ಕಳೆದ ಮೂರು ತಿಂಗಳಲ್ಲಿ ಅಧಿಕಾರ ವಹಿಸಿಕೊಂಡಮೇಲೆ ಕೆಲವು ಸಂಸ್ಥೆಗಳಿಗೆ ಖಾಸಗೀ ಸದಸ್ಯರನ್ನು ನಾಮಕರಣ ಮಾಡಿದ್ದೀರಿ. ತಾವು ಈಗಾಗಲೇ ಪಾರ್ಟಿಸಾನ್ ಆಟ್ಟಿಟ್ಯೂಡ್‌ನಿಂದ ನಿರ್ಣಯವನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಸ್ಥೂಲವಾಗಿ ಪರಿಶೀಲನೆ